ಅರಿಯಬೇಕು. ಈ ಸೂಕ್ಷ್ಮತೆ ಅರಿಯದಿದ್ದರೆ ಕಥೆಗಾರ ಕೇವಲ ಭಾಷೆಯನ್ನು ಅರಿತಿರುತ್ತಾನೆ ಹೊರತು ಕಲೆಯನ್ನಲ್ಲ. ಇಂತಹ ಕಾಲದಲ್ಲೂ ಬರೀ ಕಲೆಯ ಬೆನ್ನತ್ತಿದರೆ ಹೇಗೆ? ಎಂಬ ಪ್ರಶ್ನೆಯೂ ಕೆಲವರಲ್ಲಿ ಮೂಡಬಹುದು. ಆದರೆ, ಕರಪತ್ರಕ್ಕೂ ಕಲೆಗೂ ವ್ಯತ್ಯಾಸ ಇಲ್ಲದೇ ಹೋಗುತ್ತದೆ. ಕರಪತ್ರದ ಆಶಯಗಳನ್ನು ಕಲೆಯ ಮೂಲಕ ಸಾಧಿಸಬಹುದು. ಕನ್ನಡ ಕಥಾಜಗತ್ತಿನಲ್ಲಿ ಕಾಲಮಾನಕ್ಕೆ ತಕ್ಕಂತೆ, ಬದುಕಿನ ಪಲ್ಲಟಗಳ ಜಾಡು ಹಿಡಿದು ಪ್ರಯೋಗಗಳು ನಡೆದಿವೆ. ಹೊಸ ತಲೆಮಾರು ಕಥೆಯ 'ತಂತ್ರ' ಎಂಬ ಹಳೆಯ ಮಾನದಂಡವನ್ನು ಈ ಕಾಲಮಾನದ ಬದುಕಿನ ಗೋಜಲುಗಳಿಗೆ, ತಲ್ಲಣಗಳ ಭಾವುಕತೆಗೆ ಹೊಸಬಗೆಯಲ್ಲಿ ದುಡಿಸಿಕೊಳ್ಳದಿದ್ದರೆ ಅದು ಕಥೆಯ ಪ್ರಯೋಗವಾಗಲಾರದು.

ಹೊಸಬರಲ್ಲಿ ನಿರೂಪಣೆ ತೀರಾ 'ವಾಚ್ಯ'ದ ದಿಕ್ಕಿಗೆ ವಾಲುತ್ತದೆ. ವಾಚ್ಯ ಎಂಬುದು ಜನಪ್ರಿಯ ಮಾದರಿಯಲ್ಲ; ಅದೊಂದು ಕಲೆಯ ಅಂಶ. ಆದರೆ, ನಮ್ಮ ಕಥೆಗಾರರು ಇದನ್ನು ಬಳಸುವ ಬಗೆ ಹೇಗೆಂಬುದು ತಿಳಿಯಬೇಕು. ನಿರೂಪಣೆಯ ಜೊತೆಗೆ ವಸ್ತುವಿಗೂ ವಿವರಗಳಿಗೂ ಸರಿಯಾದ ಕೊಂಡಿಯನ್ನು ಬೆಸೆಯದೇ ಇದ್ದಾಗ ಕಥೆ ವಾಚ್ಯದ ಹಂತಕ್ಕೆ ತಲುಪುತ್ತದೆ. ಅಲ್ಲಿ ಭಾಷೆ ಕೆಲಸ ಮಾಡುವುದು ಬರೀ 'ಹೇಳಿಕೆ'ಗಳಲ್ಲಿ ಮಾತ್ರ. ಯಾವುದೇ ಕಾಲಮಾನದಲ್ಲಿ ಬರೆದರೂ ಅನುಭವ ಮತ್ತು ಮನಸ್ಥಿತಿಗಳಿಗೆ ಭಾಷೆಯ ಅನನ್ಯ ಶಕ್ತಿ ನೀಡದೇ ಹೋದರೆ ವಾಚ್ಯವೂ ಸೋಲುತ್ತದೆ. ವಾಚ್ಯವು ವಾಕ್ಯದಲ್ಲಿ ಬರುವುದೋ, ಬದುಕನ್ನು ಕಟ್ಟುವಾಗ ಬರುವುದೋ? ಎಂಬ ಪ್ರಶ್ನೆಗಳು ಬರುವಾಗ, ನಾವು




ಬದುಕನ್ನು 'ಹೇಗೆ' ಕಾಣಲಾಗುತ್ತಿದೆ ಎಂಬ ಪ್ರಶ್ನೆ ಎತ್ತಿಕೊಂಡರೆ, ಅಲ್ಲಿಗೆ ಕೊಂಚ ಮಟ್ಟಿಗೆ ಸಮಸ್ಯೆಯನ್ನು ದಾಟಿದ ಹಾಗೆ. ಈ ನಿಟ್ಟಿನಲ್ಲಿ ಕಥೆಗೂ, ಕಥೆಗಾರನಿಗೂ ಯೋಗದೃಷ್ಟಿ ಅಗತ್ಯ. ಕಥೆಯ ಮತ್ತೊಂದು ತಂತ್ರವಾದ ಸ್ವಗತವನ್ನು ಈಗಿನ ಕಥೆಗಾರರು ಅದರಲ್ಲೂ ಮಹಿಳೆಯರು ಬಳಸುವುದನ್ನು ಕಾಣುತ್ತೇವೆ. ನಮ್ಮ ಹಿರಿಯರು ಸ್ವಗತದಲ್ಲಿ ದೊಡ್ಡ ಮಟ್ಟದ ದಾರ್ಶನಿಕ ನೋಟಗಳನ್ನು ನೀಡಿದ್ದಾರೆ. ಈ ಜಾಡಿನಲ್ಲಿ ಅವರ ನೆರವಿಗೆ ಬಂದಿದ್ದು ಅಪಾರವಾದ ಜೀವನಾನುಭವ. ವೈಯಕ್ತಿಕ ತುರ್ತು ಈ ವಿಧಾನದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತದೆ. ಮನುಷ್ಯರು ತಮ್ಮನ್ನು ತಾವು ಅತಿಯಾಗಿ ಪರೀಕ್ಷಿಸಿಕೊಳ್ಳುವ ಮತ್ತು ಮನಸ್ಸನ್ನು ಆಳವಾಗಿ ತಿಳಿಯುವ ಮಾರ್ಗವೂ ಅಡಗಿರುತ್ತದೆ. ಸ್ವಗತ ಮಾದರಿಯ ಕಥೆಗಳು ತಮ್ಮ ಕುರಿತು ತಾವೇ 'ಹೇಳಿಕೊಳ್ಳುವುದಿಲ್ಲ'. ಅದೊಂದು ಬದುಕಿನ ಹುಡುಕಾಟ, ಪ್ರಶ್ನೆಗಳು, ಕೆಡಕು, ಸಮಾಜವನ್ನು ಗ್ರಹಿಸುವಲ್ಲಿ ಅದು ಯಶಸ್ಸನ್ನು ಕಾಣುತ್ತದೆ; ಅಂತಃಸ್ಸತ್ವವನ್ನು ಬಯಲುಮಾಡುವ ಕ್ರಿಯೆಯೂ ಆಗಿರುತ್ತದೆ; ತಮ್ಮನ್ನು ತಾವು ಬದುಕಿನ ಅಗ್ನಿಕುಂಡಕ್ಕೆ ಒಡ್ಡಿಕೊಳ್ಳುವ, ಅದರಿಂದ ಪಾರಾಗುವ ದಾರಿಯೂ ಆಗಿರುತ್ತದೆ. ಈ ಪ್ರಕ್ರಿಯೆಯನ್ನು ಹೀಗೆ ಅರ್ಥೈಸಿಕೊಳ್ಳಬಹುದು. ಅಸಂಗತದಿಂದ ದಿಗಿಲುಗೊಂಡ ಮನಸ್ಸು ವಿವೇಕದ ಕಡೆಗೆ ಚಲಿಸುವುದು. ವಸ್ತುವಿಗೆ ತಕ್ಕಂತೆ ಹೊಸ ತಲೆಮಾರು ಸ್ವಗತಕ್ರಮವನ್ನು ಬಳಸಿಕೊಂಡಿದೆಯೇ ಹೊರತು ಅದಕ್ಕೆ ಸಾಂದ್ರತೆ ಇಲ್ಲ.

## ವೇಗದ ಬದುಕು, ಅಂತರಂಗದ ತಬ್ಬಲಿತನ ಮತ್ತು ಮೌಲ್ಯಗಳ ಹುಡುಕಾಟ

ಹೊಸಬರ ಕಥನದಲ್ಲಿ ಸ್ವಲ್ಪಮಟ್ಟಿಗೆ ಬಹುಬಗೆಯ ವಸ್ತು ವೈವಿಧ್ಯವನ್ನು ಕಾಣಬಹುದು. ಇವರ 'ವಸ್ತು'ವಿನ ಆಯ್ಕೆಯಲ್ಲಿ ಯಾವುದೇ ರೀತಿಯ ಅಂಕುಶಗಳು ಇಲ್ಲದೇ ಇರುವುದೇ ಈ ಕಾಲಮಾನದ ವೈಶಿಷ್ಟ್ಯ. ಅಂದರೆ, ಕಳೆದ ಶತಮಾನದಲ್ಲಿ ಗೋಚರಿಸಿದ ಅನೇಕ ಚಳವಳಿಗಳು, ಅವು ರೂಪಿಸಿದ ತಾತ್ವಿಕ ಸಿದ್ಧಾಂತಗಳು ಈಗ ಏನಾಗಿವೆ ಎಂಬ ಪ್ರಶ್ನೆಗಳು ಬರಬಹುದು. ಹೊಸಬರು ಈ ದಾರಿಯನ್ನು ಸ್ಪಷ್ಟವಾಗಿ ಕಾಣದಿದ್ದರೂ, ಸದ್ಯದ ಬದುಕಿನ ಆಯಾಮಗಳೇ ಇವರ ಕಥನಕ್ಕೆ ಮಹತ್ವ. ಹಾಗಾದರೆ, ಇವರ ಕಥನದಲ್ಲಿ ಯಾವುದೇ ಹಿಂದಿನ ತತ್ವಗಳು ಜಾಗ ಪಡೆದಿಲ್ಲ ಎಂದು ಹೇಳಲಾರೆ. ಚಳವಳಿಗಳು ಮತ್ತು ಸಿದ್ಧಾಂತಗಳು ಇವರ ಕಥನದಲ್ಲಿ ಪೂರ್ಣಮಟ್ಟದ ಪೊರೆಯನ್ನು ಕಳಚಲು ಹಾತೊರೆಯುತ್ತಿವೆ. ಗ್ರಾಮೀಣ ಭಾಗದಿಂದ ಬಂದು ಬರೆಯುತ್ತಿರುವ ಅನೇಕರಲ್ಲಿ ಸಿದ್ಧಾಂತಗಳ ಛಾಯೆ ಇದ್ದರೂ,